# ಐಪಿಎಲ್

# ಊಹಾತೀತ ಹರಾಜು; ಅರ್ಥಶಾಸ್ತ್ರದ ‘ಜೂಜು’!

ಜೈದೇವ್ ಉನದ್ಕತ್, ವರುಣ್ ಚಕ್ರವರ್ತಿ ಇಂಡಿಯನ್ ‘ಪ್ರೀಮಿಯರ್ ಲೀಗ್ 2018’ರ ಆವೃತ್ತಿಗೆ ಬಹು ದೊಡ್ಡ ಮೊತ್ತಕ್ಕೆ ಹರಾಜಾದದ್ದಾದರೂ ಯಾಕೆ?

■ **ವಿಶಾಖ ಎನ್.**




ಜೈದೇವ್ ಉನದ್ಕತ್

12ನೇ ಐಪಿಎಲ್ ಕ್ರಿಕೆಟ್ ಋತುವಿಗೆ ಮೊನ್ನೆ ಮೊನ್ನೆ ಮೊದಲ ಹರಾಜು ಪ್ರಕ್ರಿಯೆ ನಡೆದು, ಮುನ್ನುಡಿ ಬರೆಯಲಾಗಿದೆ. ಅಲ್ಲಿ ವರುಣ್ ಚಕ್ರವರ್ತಿ ಎಂಬ ಚೆನ್ನೈನ ಹುಡುಗ ಹಾಗೂ ಮಹಾತ್ಮ ಗಾಂಧಿ ಜನಿಸಿದ ಪೋರಬಂದಿರನ ಯುವಕ ಜೈದೇವ್ ಉನದ್ಕತ್ ತಲಾ ₹ 8.4 ಕೋಟಿಗೆ ಹರಾಜಾಗಿ ಸುದ್ದಿಯಾಗಿದ್ದಾರೆ.

ಇಬ್ಬರ ವ್ಯಕ್ತಿಚಿತ್ರಗಳೇನೂ ಹೇಳಿಕೊಳ್ಳುವಂತಿಲ್ಲ. ತವರಿನ ದುಲೀಪ್ ಸಿನ್ಹ ಶಾಲೆಯಲ್ಲಿ ಕಲಿಯುತ್ತಿದ್ದಾಗ ಚೆಂಡಿನ ಸೀಮ್ ನೆಲಕ್ಕೆ ತಾಗುವಂತೆ ಎಸೆತಗಳನ್ನು ಹಾಕುತ್ತಿದ್ದ ಚಾಕಚಕ್ಯತೆಯಿಂದಾಗಿ ಬೌಲಿಂಗ್ ಕೋಚ್ ರಾಮ್ ಒಡೆದ್ರಾ ಅವರ ಮನಗೆದ್ದಿದ್ದ ಹುಡುಗ ಉನದ್ಕತ್. ಕೋಲ್ಕತ್ತ ನೈಟ್ ರೈಡರ್ಸ್ ಐಪಿಎಲ್ ತಂಡಕ್ಕೆ ಆಯ್ಕೆಯಾದಾಗ ಬೌಲಿಂಗ್ ಕೋಚ್ ವಸೀಂ ಅಕ್ರಂ, ‘ಇವನು ಕ್ರಿಕೆಟ್‌ನಲ್ಲಿ ಬೆಳೆಯುತ್ತಾನೆ’ ಎಂದು ಭವಿಷ್ಯ ನುಡಿದಿದ್ದರು. ಅಂತರರಾಷ್ಟ್ರೀಯ ಕ್ರಿಕೆಟ್ ಮಟ್ಟಿಗೆ ಅದು ನಿಜವಾಗದೇ ಇದ್ದರೂ ಐಪಿಎಲ್‌ನಲ್ಲಿ ಸತ್ಯವೇ ಆಯಿತು.

ದಕ್ಷಿಣ ಆಫ್ರಿಕಾ ವಿರುದ್ಧ ಒಂದೇ ಒಂದು ಟೆಸ್ಟ್ ಪಂದ್ಯ ಆಡಿ ಒಂದೂ ವಿಕೆಟ್ ಪಡೆಯದ ಉನದ್ಕತ್, ಏಳು ಏಕದಿನದ ಪಂದ್ಯಗಳಿಂದ